ಪತ್ರಿಕೆಯವರೂ ಮುದ್ರಿಸುವುದಿಲ್ಲವಾದ್ದರಿಂದ ನಾನಿಲ್ಲಿ ಬರೆಯುತ್ತಿಲ್ಲ.

ಆ ಕುಟುಂಬಗಳ ಇನ್ನೂರು ವರ್ಷಗಳಷ್ಟು ಹಳೆಯದಾದ ದ್ವೇಷಕ್ಕೆ ನಿಜವಾದ ಕಾರಣವೇನೆಂದು ಕಂಡುಹಿಡಿಯುವುದೇನು ಸುಲಭವೆ? ಓಬೀರಾಯನ ಕಾಲದವನೊಬ್ಬ ಒಬ್ಬನ ಗಾಡಿಯ ಚಕ್ರ ಕಳುವಾಯಿತೆಂಬ ಕಾರಣ ಕೊಟ್ಟರೆ ಇನ್ನೊಬ್ಬ ಕೋಳಿಗಳು ಕಳುವಾದವೆಂಬ ಸಬೂಬು ಕೊಟ್ಟ. ಜೊತೆಗೆ, ಇಬ್ಬರ ನಡುವೆಯಿದ್ದ ಒಂದು ಬೇಲಿ ಕಿತ್ತುಹೋಯಿತೆಂಬ ಗುಮಾನಿಯೂ ಇತ್ತು.

ಕಾರಣ ಏನೇ ಇದ್ದರೂ ಅಂಥ ವ್ಯತ್ಯಾಸವಾಗುತ್ತಿರಲಿಲ್ಲವೆನ್ನಿ. ನಿಜಕ್ಕೂ ಕುತೂಹಲ ಹುಟ್ಟಿಸುವ ಸಂಗತಿಯೆಂದರೆ ಎರಡೂ ಕುಟುಂಬದವರು ತಮ್ಮ ತಮ್ಮ ದ್ವೇಷಗಳನ್ನು ಶಾಶ್ವತವಾಗಿಟ್ಟುಕೊಳ್ಳಲು ಏನೆಲ್ಲ ಮಾಡುತ್ತಿದ್ದರೆಂಬುದು. ಒಂದೇ ಒಂದು ಉದಾಹರಣೆ ತೊಕ್ಕೊಳ್ಳಿ: ಒಂದು ಕುಟುಂಬದವರು ತಮ್ಮ ಶತ್ರುಗಳ ಹೆಸರೆತ್ತಿದರೆ ಸಾಕು, ಆ ಸಂದರ್ಭದಲ್ಲಿ ಹಾಜರಿರುತ್ತಿದ್ದ ಸಣ್ಣ ಮಕ್ಕಳು ಕೂಡ ಕೂಡಲೇ ಕತ್ತು ಕುಯ್ದುಬಿಡುವವರಂತೆ ಮುಖ ಮಾಡುತ್ತಿದ್ದರು. ಇನ್ನೂ ಕಂಕುಳಿನಲ್ಲಿರುವ ಮಕ್ಕಳು ಕೂಡ ಬಣ್ಣ ಬದಲಾಯಿಸುತಿದ್ದವು. ಯಾರಾದರೊಬ್ಬ ಒಂದು ಮರದಿಂದ ಬಿದ್ದು ಗಾಯ ಮಾಡಿಕೊಂಡರೆ ಅವನ ಮನೆಯವರು ಇನ್ನೊಂದು ಕುಟುಂಬದ ಯಾರಾದರೊಬ್ಬ ಗಾಯ ಮಾಡಿಕೊಳ್ಳುವವರೆಗೂ ಬಿಡುತ್ತಿರಲಿಲ್ಲ. ಒಂದು ಮನೆಗೆ ಮರದ ಪೆಟಾರಿಯೊಂದು ಬಂದರೆ ಇನ್ನೊಂದು ಮನೆಗೂ ಅಂಥ ಪೆಟಾರಿಯೇ ಬರುತ್ತಿತ್ತು. ನೀವು ನಂಬಿದರೆ ನಂಬಿ ಬಿಟ್ಟರೆ ಬಿಡಿ, ಏಳು ವರ್ಷಗಳ ಹಿಂದೆ ಪಡುವಣ ಅಪ್ಪಣ್ಣನ ಮನೆಯ ಹುಡುಗನೊಬ್ಬನಿಗೆ ದೂರದೊಂದು ಊರಿನಿಂದ ಹೆಣ್ಣು ತಂದು ಮದುವೆ ಮಾಡಿದರು. ಮದುವೆಯಾದ ಮೇಲಷ್ಟೇ ಆಕೆ ತುಸು ಕುಂಟುತ್ತಿದ್ದಳೆಂದು ಮೊಟ್ಟಮೊದಲು ಗೊತ್ತಾದದ್ದು ಮೂಡಲ ಅಪ್ಪಣ್ಣನ ಮನೆಯವರಿಗೆ. ಅವರು ಕೂಡಲೇ ಬೇರೆ ಬೇರೆ ಊರುಗಳಿಗೆ ದಾಳಿಯಿಟ್ಟು ಕಡೆಗೂ ಒಬ್ಬ ಕುಂಟಿಯನ್ನೇ ತಲಾಷು ಮಾಡಿ ತಮ್ಮ ಮನೆಯ ಹುಡುಗನೊಬ್ಬನಿಗೆ ತಂದುಕೊಂಡರು. ಇದೆಲ್ಲ ಅತಿಯಾಯಿತು ಎಂದು ನಿಮಗೆ ಅನ್ನಿಸಬಹುದು. ವಸ್ತುಸ್ಥಿತಿಯೆಂದರೆ ಆ ಎರಡು ಕುಟುಂಬಗಳ ಮಂದಿ ಮುಖಕ್ಕೆ ಮುಖ ಕೊಡಬೇಕಾದ ಸಂದರ್ಭವೇನಾದರೂ ಬಂದರೆ ಮುಷ್ಟಿ ಬಿಗಿಹಿಡಿದುಕೊಂಡು, ಮುಖ ಸಿಂಡರಿಸಿಕೊಂಡು, ಹಲ್ಲು ಕಚ್ಚಿಕೊಂಡು ಗುರ್ರೆನ್ನುತ್ತಾ ತಮ್ಮ ತಮ್ಮ ಮುಖವನ್ನು ಬೇರೆ ಕಡೆ ತಿರುಗಿಸಿಕೊಳ್ಳುತ್ತಿದ್ದರು ಅಥವಾ ಅಸಾಧ್ಯ ಸಿಟ್ಟಿನಿಂದ ಭುಸುಗುಟ್ಟುತ್ತಿದ್ದರು. ಅವರನ್ನು ನೋಡಿ ಯಾರಿಗೂ ಆಶ್ಚರ್ಯವಾಗುತ್ತಿರಲಿಲ್ಲ. ಯಾಕೆಂದರೆ, ಲಾಗಾಯತಿನಿಂದ ಎಲ್ಲರೂ ಅವರನ್ನು ನೋಡುತ್ತಿದ್ದುದೇ ಹಾಗೆ.

ಒಟ್ಟಿನಲ್ಲಿ ಆ ಎರಡು ಕುಟುಂಬಗಳ ನಡುವೆ ಅಗಾಧ ಪರ್ವತದಂಥ ಒಂದು ಮೌನ ನೆಲೆಸಿಬಿಟ್ಟಿತ್ತು. ದಿನೇ ದಿನೇ ದ್ವೇಷವನ್ನು ಹೆಚ್ಚಿಸುತ್ತಿದ್ದ ಆ ಮೌನ ಒಂದಲ್ಲ ಒಂದು ದಿನ ಮುರಿಯಬಹುದೆಂದು ಯಾರಿಗೂ ಗೊತ್ತಿರಲಿಲ್ಲ. ಆದರೂ ಅದು ಮುರಿಯಲಿತ್ತೆಂದು ನಾನು ಹೇಳಿದರೆ ನೀವು ನಂಬಲಿಕ್ಕಿಲ್ಲ. ಈಗ ಆಮೇಲೆ ಏನೇನಾಯಿತೆಂದು ನೋಡಿ.

ಈಗಾಗಲೇ ನಿಮಗೆ ಗೊತ್ತುಮಾಡಿರುವಂತೆ ಅದು ಸಮುದ್ರ ತೀರದಲ್ಲಿದ್ದ ಊರು. ಮಳೆಗಾಲದಲ್ಲಿ ಸಮುದ್ರ ಹೇಗಿರುತ್ತದೆ, ಅದು ಎಷ್ಟು ಭಯಂಕರವಾಗಿ ಘರ್ಜಿಸುತ್ತದೆ, ಏನೆಲ್ಲವನ್ನು ಬೇಲೆಗೆ ತಂದುಹಾಕುತ್ತದೆ ಎಂದು ಕಣ್ಣಾರೆ ನೋಡಿ ಅನುಭವಿಸಿದವರಿಗೇ ಗೊತ್ತು. ಇರಲಿ, ಆ ಊರಿನ ಅನೇಕ ಮಂದಿ ತೆಂಕಣ ಅಪ್ಪಣ್ಣ, ಪಡುವಣ ಅಪ್ಪಣ್ಣ ಕುಟುಂಬದವರಂತೆ ಸಾಕಷ್ಟು ಹೊಲ ಗದ್ದೆಗಳಿದ್ದರೂ ಆಗಾಗ ಒಂದಷ್ಟು ಮೀನು ಹಿಡಿದುಕೊಳ್ಳುತ್ತಿದ್ದವರು. ಇನ್ನೂರು ವರ್ಷಗಳ ದೀರ್ಘ ಮೌನ ನಿರಾತಂಕವಾಗಿ ಮುಂದುವರಿಯುತ್ತಿರುವಾಗಲೇ ಒಂದು ಸಾಯಂಕಾಲ ತೆಂಕಣ ಅಪ್ಪಣ್ಣ ಮತ್ತು ಪಡುವಣ ಅಪ್ಪಣ್ಣ ಒಂದಷ್ಟು ಮೀನು ಹಿಡಿದುಕೊಳ್ಳುವುದಕ್ಕಾಗಿ ಬಲೆಗಳ ಸಮೇತ ಬೋಟುಗಳಲ್ಲಿ ಹೋಗಿದ್ದರು. ನಿಜ ಹೇಳಬೇಕೆಂದರೆ ಇಬ್ಬರೂ ಒಂದೇ ಸಲಕ್ಕೆ ಸಮುದ್ರ ತೀರದಿಂದ ಹೊರಟು ಎಲ್ಲಿ